ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಕಡೂರು.

ಸಿ.ಸಿ.ಸಂಖ್ಯೆ 774/2023

ಫಿರ್ಯಾದುದಾರರುಃ- ಸರ್ಕಾರದ ಪರವಾಗಿ ಕಡೂರು ಪೊಲೀಸರು

ವಿರುದ್ಧ

ಆರೋಪಿತರುಃ- ಹುಲಿಯಪ್ಪ ಮತ್ತು ಇತರರು

**ದೋಷಾರೋಪಣೆ**

ಶ್ರೀಮತಿ ಅಫ್ರಿನ್ ಸುಲ್ತಾನ, ಬಿ.ಎ.ಎಲ್. ಎಲ್.ಎಲ್.ಬಿ, ಪ್ರಭಾರ ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಕಡೂರು ಆದ ನಾನು ಈ ಕೆಳಗೆ ಕಾಣಿಸಿರುವಃ

1.ಹುಲಿಯಪ್ಪ ಬಿನ್ ಬಸಪ್ಪ, ಸುಮಾರು 64 ವರ್ಷ,

2. ಶಿವಕುಮಾರ ಬಿನ್ ಹುಲಿಯಪ್ಪ, ಸುಮಾರು 36 ವರ್ಷ,

3. ಮಹೇಶ ಬಿನ್ ಹುಲಿಯಪ್ಪ, ಸುಮಾರು 30 ವರ್ಷ,

ಆರೋಪಿತರೆಲ್ಲರೂ ಕುಪ್ಪಾಳು ಗ್ರಾಮ, ಕಡೂರು ತಾಲ್ಲೂಕು, ಚಿಕ್ಕಮಗಳೂರು ವಾಸಿಗಳಾಗಿರುತ್ತಾರೆ.

ಆದ ನಿಮ್ಮ ವಿರುದ್ಧ ಈ ಕೆಳಗಿನಂತೆ ಹೊರಿಸಿರುವ ದೋಷಾರೋಪಣೆ ಏನೆಂದರೆಃ

ದಿನಾಂಕ ಃ 28.11.2021 ರಂದು ಬೆಳಿಗ್ಗೆ 10.00 ಗಂಟೆ ಸಮಯದಲ್ಲಿ ಕಡೂರು ಪೋಲೀಸ್ ಠಾಣಾ ವ್ಯಾಪ್ತಿಯ ಕುಪ್ಪಾಳು ಗ್ರಾಮದ ಸರ್ವೇ ನಂಬರ್ 123/1 ರ ಜಮೀನಿನಲ್ಲಿ ಚಾಸಾ-1 ಕಾಳಮ್ಮರವರು ಹಾಕಿರುವ ರಾಗಿ ಬೆಳೆಯನ್ನು ಹಸುಗಳು ತಿಂದಿರುವ ವಿಚಾರದಲ್ಲಿ ಚಾಸಾ-1 ರವರು ಬೈಯುತ್ತಿರುವಾಗ, ಆರೋಪಿತರಾದ ನೀವು ಸಮಾನ ಉದ್ದೇಶದಿಂದ ಸದರಿ ಜಮೀನಿಗೆ ಅತಿಕ್ರಮ ಪ್ರವೇಶ ಮಾಡಿರುತ್ತೀರಿ. ಆದ್ದರಿಂದ ನೀವು ಭಾರತೀಯ ದಂಡ ಸಂಹಿತೆಯ ಕಲಂ 447 ಸಹಕಲಂ 34 ರ ರೀತ್ಯಾ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ಎರಡನೆಯದಾಗಿ ಮೇಲೆ ಹೇಳಿದ ದಿನಾಂಕ, ಸಮಯ, ಸ್ಥಳ ಹಾಗೂ ಸಂದರ್ಭಗಳಂದು ಆರೋಪಿತರಾದ ನೀವು ಸಮಾನ ಉದ್ದೇಶದಿಂದ ಚಾಸಾ-1 ರವರಿ ಜಮೀನಿಗೆ ಅತಿಕ್ರಮ ಪ್ರವೇಶ ಮಾಡಿ, ಚಾಸಾ-1 ರವರಿಗೆ ಬೇವರ್ಸಿಮುಂಡೆ, ಹಾದರಗಿತ್ತಿ ಎಂದು ಎಂದು ಅವಾಚ್ಯ ಶಬ್ದಗಳಿಂದ ಬೈದು ಸಾರ್ವಜನಿಕ ಶಾಂತಿಭಂಗವನ್ನುಂಟು ಮಾಡಿರುತ್ತೀರಿ. ಆದ್ದರಿಂದ ನೀವು ಭಾರತೀಯ ದಂಡ ಸಂಹಿತೆಯ ಕಲಂ 504 ಸಹಕಲಂ 34 ರ ರೀತ್ಯಾ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ಮೂರನೆಯದಾಗಿ ಮೇಲೆ ಹೇಳಿದ ದಿನಾಂಕ, ಸಮಯ, ಸ್ಥಳ ಹಾಗೂ ಸಂದರ್ಭಗಳಂದು ಆರೋಪಿತರಾದ ನೀವು ಸಮಾನ ಉದ್ದೇಶದಿಂದ 2 ನೇ ಆರೋಪಿಯಾದ ನೀವು ಕೈಯ್ಯಿಂದ ಚಾಸಾ-1 ರವರ ಎಡಕಿವಿಯ ಹತ್ತಿರ ಹಲ್ಲೆ ಮಾಡಿ ಸ್ವಯಿಚ್ಚೆಯಿಂದ ನೋವುಂಟು ಮಾಡಿರುತ್ತೀರಿ. ಆದ್ದರಿಂದ

ನೀವು ಭಾರತೀಯ ದಂಡ ಸಂಹಿತೆಯ ಕಲಂ 323 ಸಹಕಲಂ 34ರ ರೀತ್ಯಾ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ಕೊನೆಯದಾಗಿ ಮೇಲ್ಕಂಡ ದಿನಾಂಕ, ಸಮಯ, ಸ್ಥಳ ಹಾಗೂ ಸಂದರ್ಭಗಳಂದು ಆರೋಪಿತರಾದ ನೀವು ಸಮಾನ ಉದ್ದೇಶದಿಂದ ಚಾಸಾ-1 ರವರೊಂದಿಗೆ ಜಗಳ ತೆಗೆದು, ಇನ್ನೊಂದು ಸಾರಿ ನಮ್ಮ ತೋಟದ ಹತ್ತಿರ ಬಂದರೆ ಕೊಲೆ ಮಾಡುವುದಾಗಿ ಪ್ರಾಣ ಬೆದರಿಕೆ ಹಾಕಿರುತ್ತೀರಿ. ಆದ್ದರಿಂದ ನೀವು ಭಾರತೀಯ ದಂಡ ಸಂಹಿತೆಯ ಕಲಂ 506 ಸಹಕಲಂ 34ರ ರೀತ್ಯಾ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ಈ ಆರೋಪಗಳ ಮೇಲೆ ನೀವು ಈ ನ್ಯಾಯಾಲಯದ ಆರೋಪ ವಿಚಾರಣೆಗೆ ಗುರಿಯಾಗತಕ್ಕದೆಂದು ನಾನು ಈ ಮೂಲಕ ನಿರ್ದೇಶಿಸುತ್ತೇನೆ.

ದಿನಾಂಕಃ **01** ನೇ ದಿವಸ **ಅಕ್ಟೋಬರ್** ಮಾಹೆ 2024 ನೇ ಇಸವಿ.

-ಸಹಿ-

**(ಅಫ್ರಿನ್ ಸುಲ್ತಾನ),**

**C/c.** ಪ್ರಧಾನ ಪ್ರದನ್ಯಾದಂ ಕಡೂರು**.**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ,ರವರ ನ್ಯಾಯಾಲಯ, ಕಡೂರು.**

**ಸಿ.ಸಿ.ಸಂಖ್ಯೆ:774/ 2023**

ಆರೋಪಿ ಸಂಖ್ಯೆ : 3

ಆಪಾದಿತರ ಹೆಸರು : ಮಹೇಶ
ಗಂಡನ ಹೆಸರು : ಹುಲಿಯಪ್ಪ
ವಯಸ್ಸು : 30
ಉದ್ಯೋಗ : -
ವಾಸಸ್ಥಳ : ಕುಪ್ಪಾಳು ಗ್ರಾಮ

**ದಂಡ ಪ್ರಕ್ರಿಯಾ ಸಂಹಿತೆ ಕಲಂ 251 ಅಡಿ ಪ್ರಕಾರ ಆರೋಪಿಯ ಹೇಳಿಕೆ:**

ಪ್ರ: 1) ನಿಮಗೆ ತಿಳಿಯುವಂತಹ ಭಾಷೆಯಲ್ಲಿ ಓದಿ ಹೇಳಲಾದ ಆರೋಪಣೆಯನ್ನು ನೀವು ಕೇಳಿ ತಿಳಿದುಕೊಂಡಿರುವಿರಾ?
ಉ: ಹೌದು

ಪ್ರ: 2) ಸದರಿ ಆರೋಪಣೆಗಳನ್ನು ನೀವು ಒಪ್ಪಿಕೊಳ್ಳುತ್ತೀರಾ ಅಥವಾ ನಿರಾಕರಿಸುತ್ತೀರಾ?
ಉ: ನಾವು ಯಾವುದೇ ತಪ್ಪು ಮಾಡಿರುವುದಿಲ್ಲ.

ಮೇಲ್ಕಾಣಿಸಿದ ಹೇಳಿಕೆಯನ್ನು ದಿನಾಂಕ ರಂದು ನನ್ನ ಉಪಸ್ಥಿತಿಯಲ್ಲಿ ಆರೋಪಿಯಿಂದ ಪಡೆಯಲಾಗಿದ್ದು ಸದರಿ ಹೇಳಿಕೆಯು ಆರೋಪಿಯು ಕೊಟ್ಟ ನಿಜವಾದ ಹೇಳಿಕೆಯಾಗಿದೆ.

ಸಹಿ-

ಪ್ರಭಾರ **ಪ್ರಧಾನ ಪ್ರ.ದ.ನ್ಯಾ.ದಂ ಕಡೂರು.**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ,ರವರ ನ್ಯಾಯಾಲಯ, ಕಡೂರು.**

**ಸಿ.ಸಿ.ಸಂಖ್ಯೆ:774/ 2023**

ಆರೋಪಿ ಸಂಖ್ಯೆ : 2

ಆಪಾದಿತರ ಹೆಸರು : ಶಿವಕುಮಾರ
ಗಂಡನ ಹೆಸರು : ಹುಲಿಯಪ್ಪ
ವಯಸ್ಸು : 36
ಉದ್ಯೋಗ : -
ವಾಸಸ್ಥಳ : ಕುಪ್ಪಾಳು ಗ್ರಾಮ

**ದಂಡ ಪ್ರಕ್ರಿಯಾ ಸಂಹಿತೆ ಕಲಂ 251 ಅಡಿ ಪ್ರಕಾರ ಆರೋಪಿಯ ಹೇಳಿಕೆ:**

ಪ್ರ: 1) ನಿಮಗೆ ತಿಳಿಯುವಂತಹ ಭಾಷೆಯಲ್ಲಿ ಓದಿ ಹೇಳಲಾದ ಆರೋಪಣೆಯನ್ನು ನೀವು ಕೇಳಿ ತಿಳಿದುಕೊಂಡಿರುವಿರಾ?
ಉ: ಹೌದು

ಪ್ರ: 2) ಸದರಿ ಆರೋಪಣೆಗಳನ್ನು ನೀವು ಒಪ್ಪಿಕೊಳ್ಳುತ್ತೀರಾ ಅಥವಾ ನಿರಾಕರಿಸುತ್ತೀರಾ?
ಉ: ನಾವು ಯಾವುದೇ ತಪ್ಪು ಮಾಡಿರುವುದಿಲ್ಲ.

ಮೇಲ್ಕಾಣಿಸಿದ ಹೇಳಿಕೆಯನ್ನು ದಿನಾಂಕ ರಂದು ನನ್ನ ಉಪಸ್ಥಿತಿಯಲ್ಲಿ ಆರೋಪಿಯಿಂದ ಪಡೆಯಲಾಗಿದ್ದು ಸದರಿ ಹೇಳಿಕೆಯು ಆರೋಪಿಯು ಕೊಟ್ಟ ನಿಜವಾದ ಹೇಳಿಕೆಯಾಗಿದೆ.

ಸಹಿ-

ಪ್ರಭಾರ **ಪ್ರಧಾನ ಪ್ರ.ದ.ನ್ಯಾ.ದಂ ಕಡೂರು.**